**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.265/2021**

ಪಿ.ಡಬ್ಲ್ಯೂ.1
ಸಿ.ಡಬ್ಲ್ಯೂ:1

**ಹೆಸರು** : ರಘುನಾಥ್ ಎಸ್ ವಿ
ತಂದೆಯ **ಹೆಸರು** : ವೀರಭದ್ರಪ್ಪ
**ವಯಸ್ಸು** : 32 **ವರ್ಷ**
**ಉದ್ಯೋಗ** : ಪಿ ಎಸ್ ಐ
**ವಾಸಸ್ಥಳ** : ಶಿವಮೊಗ್ಗ

**ದಿನಾಂಕಃ 22-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ನಾನು ದಿಃ **15-11-2019** ರಿಂದ *23-07-2021* ರವರೆಗೆ ಲಕ್ಕವಳ್ಳಿ **ಪೋಲೀಸ್ ಠಾಣೆಯಲ್ಲಿ** ಪಿ ಎಸ್ ಐ **ಆಗಿ ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿನಾಂಕಃ*11.04.2020* ರಂದು ಮಧ್ಯಾಹ್ನ *2-30* ಗಂಟೆಗೆ ನಾನು ಠಾಣೆಯಲ್ಲಿರುವಾಗ ಚಾಸಾ-*11* ರವರು ಕರೆ ಮಾಡಿ ಕರಕುಚ್ಚಿ ತಾಂಡ್ಯದ ರಾಮರಾಜ್ ಎಂಬುವವರ ತೋಟದ ಹತ್ತಿರ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ತಿಳಿಸಿದ್ದು, ನಂತರ ಚಾಸಾ-*7* ರಿಂದ *10* ರವರುಗಳನ್ನು ಕರೆದುಕೊಂಡು *2-45* ಗಂಟೆಗೆ ಠಾಣೆಯನ್ನು ಬಿಟ್ಟು *3.00* ಗಂಟೆಗೆ ಕರಕುಚ್ಚಿ ತಾಂಡ್ಯದಬಸ್ ನಿಲ್ದಾಣದ ಹತ್ತಿರ ಹೋಗಿದ್ದು, ಚಾಸಾ-*11* ರವರು ಚಾಸಾ-*2* ಮತ್ತು *3* ರವರನ್ನು ಕರೆದುಕೊಂಡು ಬಂದಿದ್ದು, ನಂತರ ಅವರಿಗೆ ನೋಟೀಸು ನೀಡಿ ದಾಳಿಗೆ ಸಹಕರಿಸಲು ಕೋರಿಕೊಂಡು *3.10* ಗಂಟೆ ಸಮಯಕ್ಕೆ ಅಲ್ಲಿಂದ ಬಿಟ್ಟು *3.20* ಗಂಟೆಗೆ ರಾಮರಾಜ್ ಎಂಬುವವರ ತೋಟದ ಒಳಗೆ ಹೋಗುತ್ತಿದ್ದಾಗ ನಮ್ಮಎದುರುಗಡೆಯಿಂದ ಒಂದು ಪಿಕಪ್ ವಾಹನ ಬರುತ್ತಿದ್ದು, ನಮ್ಮ ಜೀಪನ್ನು ನೋಡಿ ಪಿಕಪ್ ವಾಹನವನ್ನು ಬಿಟ್ಟು ಆರೇಪಿ ಓಡಿ ಹೋಗಿರುತ್ತಾರೆ. ನಮ್ಮ ಸಿಬ್ಬಂದಿಗಳು ಹುಡುಕಿದರೂ ಸಿಕ್ಕಿರುವುದಿಲ್ಲ.

ನಂತರ ಪಂಚರ ಸಮಕ್ಷಮ ಪಿಕಪ್ ವಾಹನವನ್ನು ಪರಿಶೀಲಿಸಿ ನೋಡಲಾಗಿ ಸದರಿ ವಾಹನದ ನೊಂದಣಿ ಸಂಖ್ಯೆ ಕೆಎ.*18*.ಸಿ.*4311* ಆಗಿರುತ್ತದೆ. ಸದರಿ ವಾಹನದ ಹಿಂದೆ ಮರಳು ತುಂಬಿರುವುದು ಕಂಡುಬಂದಿರುತ್ತದೆ. ನಂತರ ಓಡಿ ಹೋದ ಆರೋಪಿ ಹೆಸರು ಕೇಳಲಾಗಿ ಹರೀಶ್ ಬಿನ್ ಚಂದ್ರನಾಯ್ಕ, ಕರಕುಚ್ಚಿ ತಾಂಡ್ಯ ಎಂದು ಪಂಚರು ತಿಳಿಸಿದ್ದು, ನಂತರ ಚಾಸಾ-*9* ರವರು ಅಲ್ಲಿಯೇ ವರದಿಯನ್ನು ತಯಾರಿಸಿ, ಚಾಸಾ-*12* ರವರಿಗೆ ನೀಡುವಂತೆ ಕಳುಹಿಸಿರುತ್ತೇನೆ. ಚಾಸಾ-*12* ರವರು *4.50* ಗಂಟೆಗೆ ಕರೆ ಮಾಡಿ ಪ್ರಕರಣವನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ತಿಳಿಸಿದ್ದು, ನಂತರ *4.50* ರಿಂದ *5.50* ರವರೆಗು ಅಮಾನತ್ತು ಮಹಜರ್ ಮಾಡಿಕೊಂಡು ನಂತರ ಸಂಜೆ *6.30* ಕ್ಕೆ ಅಮಾನತ್ತುಪಡಿಸಿಕೊಂಡಿರುವ ಮುದ್ದೆಮಾಲು ಮತ್ತು ವಾಹನವನ್ನು ತೆಗೆದುಕೊಂಡು ಹೋಗಿ ಮಾಲುಪಟ್ಟಿಗೆ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮುದ್ದೆ ಮಾಲಿನ ಅಂದಾಜು ಬೆಲೆ ರೂ.*3,000/-* ಗಳಾಗಿರುತ್ತದೆ.

ಅದೇ ದಿನ ಚಾಸಾ-*2,3* ಮತ್ತು ಚಾಸಾ-*7* ರಿಂದ *11* ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ*13.04.2020* ರಂದು ವಶಪಡಿಸಿಕೊಂಡ ಮರಳಿನ ಮೌಲ್ಯವನ್ನು ತಿಳಿಸಲು ಕಾರ್ಯಪಾಲಕ ಅಭಿಯಂತರರು, ತರೀಕೆರೆ ಇವರಿಗೆ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಗಣಿ ಮತ್ತು ಭೂ ಇಲಾಖಾಧಿಕಾರಿಗಳು, ಚಿಕ್ಕಮಗಳೂರು ರವರಿಗೆ ಆರೋಪಿ ವಿರುದ್ಧ ಪ್ರಕರಣ ದಾಖಲಿಸುವಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ. ಅದೇ ದಿನ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಮರಳು ತುಂಬಿದ ಸ್ಥಳವನ್ನು ಪರಿಶೀಲಿಸಿ ವರದಿ ನೀಡುವಂತೆ ಮನವಿ ಮಾಡಿರುತ್ತೇನೆ. ನಂತರ ಚಾಸಾ-*13* ರವರಿಗೆ ಮುಂದಿನ ತನಿಖೆಗಾಗಿ ಕಡತವನ್ನು ವಹಿಸಿಕೊಟ್ಟಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವರದಿಯಾಗಿದ್ದು, ಸದರಿ ದಾಖಲೆಯನ್ನು ನಿಪಿ-*1* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-*1(ಎ)* ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-*2* ಎಂದು ಗುರುತಿಸಲಾಗಿದ್ದು,

ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಪಂಚರಿಗೆ ನೀಡಿದ ನೋಟೀಸ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಛಾಯಾಚಿತ್ರಗಳನ್ನು ತೋರಿಸಲಾಗಿ ಅವುಗಳನ್ನು ನಿಪಿ-4 ಮತ್ತು 5 ಎಂದು, ಸಿಡಿಯನ್ನು ನಿಪಿ-6 ಎಂದು, ದಿ:13.04.2020 ರಂದು ಕಾರ್ಯಪಾಲಕ ಅಭಿಯಂತರರಿಗೆ ಬರೆದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ದಿ:13.04.2020 ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಬರೆದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು, ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿಗಳಿಗೆ ಬರೆದ ಮನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

***ಪಾಟೀ ಸವಾಲು : ಆರೋಪಿತರ ಪರ ಶ್ರೀ ಆರ್.ಪಿ. ವಕೀಲರಿಂದ.***

ನಿಮಗೆ ಯಾವುದೇ ಮಾಹಿತಿ ಬರೆದಿದ್ದರೂ ಸಹ ಮಾಹಿತಿ ಬಂದಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಚಾಸಾ-7 ರಿಂದ 11 ರವರುಗಳ ಜೊತೆ ಯಾವುದೇ ದಾಳಿ ನಡೆಸಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರಿಗೆ ಯಾವುದೇ ನೋಟೀಸನ್ನು ನೀಡದೇ ಇದ್ದರೂ ಸಹ ಸಾಕ್ಷಿದಾರರುಗಳನ್ನು ಪ್ರಕರಣಕ್ಕಾಗಿ ಸೃಷ್ಠಿಸಿಕೊಂಡಿರುತ್ತೀರ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರುಗಳ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಕರಕುಚ್ಚಿ ಬಸ್ ನಿಲ್ದಾಣದ ಹತ್ತಿರ ಮತ್ತು ರಾಮರಾಜ್ ರವರ ತೋಟದ ಹತ್ತಿರ ನೀವು ಹೋಗಿ ಯಾವುದೇ ಕ್ರಮ ಕೈಗೊಳ್ಳದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಪಿಕಪ್ ವಾಹನ ನಿಲ್ಲಿಸಿ ಯಾವುದೇ ವ್ಯಕ್ತಿ ಓಡಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ವಾಹನದ ಚಾಲಕನು ಓಡಿ ಹೋದಾಗ ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದರೆ, ಸಾಕ್ಷಿಯು ಅವರು ದೂರ ಇದ್ದ ಕಾರಣ ಬಟ್ಟೆಯ ಬಣ್ಣವನ್ನು ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಸ್ಥಳ ಮಹಜರ್ ಮತ್ತು ***4.50*** ರಿಂದ ***5.50*** ಗಂಟೆಯವರೆಗೂ ಯಾವುದೇ ಅಮಾನತ್ತು ಮಹಜರ್ ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನಾನು ಚಾಸಾ-***9*** ರವರಿಗೆ ಹೇಳಿ ಯಾವುದೇ ವರದಿ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮರಳಿನ ಅಮಾನತ್ತು ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಅಧಿಕಾರಿಗಳಿಗೆ ಮನವಿ ಪತ್ರಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಪ್ರಕರಣದ ಬಗ್ಗೆ ಅವರುಗಳಿಂದ ಯಾವುದೇ ವರದಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮರಳಿಗು ಆರೋಪಿಗು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ಆರೋಪಿತನ ವಿರುದ್ದ ಸುಳ್ಳು ವರದಿಯನ್ನು ತಯಾರು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಠಾಣಾ ಅಂಕಿಅಂಶಗಳಿಗಾಗಿ ಆರೋಪಿ ವಿರುದ್ಧ ಸುಳ್ಳು ಪ್ರಕರಣದ ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಛಾಯಾಚಿತ್ರಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

ಸಹಿ/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***